ಧಾರೆ ಪರದೆ ಸರಿಸಿದಾಗ ಸ್ವಲ್ಪ ಮಾತ್ರ ಮುಖ ಎತ್ತಿ ಶೇಖರನಿಗೆ ಮಾಲೆ ಹಾಕುತ್ತಿದ್ದ ರಾಧೆಗೆ ಶೇಖರನ ಹಿಂದೆ ನಿಂತಿದ್ದ ಗಿರಿಜತ್ತಿಗೆಯ ದೃಷ್ಟಿ ಅಕಸ್ಮಾತಾಗಿ ಕೂಡಿಹೋಯ್ತು. ರಾಧೆ ನಕ್ಕಳು. ಗಿರಿಜತ್ತಿಗೆಯೂ ನಗುವ ಮೊದಲೇ ರಾಧೆಯ ಕಣ್ಣು ಶೇಖರನನ್ನು ನೋಡುತ್ತಿದ್ದವು. ಥೇಟ್ ವೇಣುವನ್ನು ಕಂಡಾಗ ಉಕ್ಕುತ್ತಿದ್ದ ಪ್ರೀತಿಯೇ ಆ ಕಂಗಳಲ್ಲಿ ಕಾಣಿಸುತ್ತಿತ್ತು!!...

ಈ ಹುಡುಗಿಯ ಪ್ರೀತಿಗೆ ಏನು ಹೇಳೋಣ, ಎಲ್ಲವನ್ನು ಮರೆಸುವಷ್ಟು ಪ್ರೀತಿಸಿ ಈಗ ಎಲ್ಲವನ್ನೂ ಮರೆತು ನಡೆದುಬಿಟ್ಟಳಲ್ಲ. ಹೆಣ್ಣುಮಕ್ಕಳೇ ಹೀಗೆ ತಮ್ಮದು ಎಂಬ ಭಾವ ಬಂದುಬಿಟ್ಟರೆ ಸಾಕು ಎಣೆಯಿಲ್ಲದಷ್ಟು ಪ್ರೀತಿಸಿ ಸಂಭ್ರಮಿಸುತ್ತಾರೆ. ಅದೆಲ್ಲಿರುತ್ತದೆಯೋ ಅಷ್ಟೊಂದು ಪ್ರೀತಿ. ಹೆಣ್ಣಿನ ಕಣ್ಣಲ್ಲಿ ಕಣ್ಣೀರು ಬತ್ತಬಹುದು, ಪ್ರೀತಿಯಲ್ಲ...

ಗಿರಿಜತ್ತಿಗೆ ಎಣಿಸಿದಂತೆ ಯಾವ ಪವಾಡವೂ ಜರುಗಲಿಲ್ಲ. ಸರಿಯಾಗಿ 12.31ರ ಅಭಿಜಿತ ಲಗ್ನದಲ್ಲಿ ಶೇಖರ ರಾಧೆಗೆ ತಾಳಿ ಕಟ್ಟಿದ. ಸುಲಗ್ನೇ ಸಾವಧಾನ, ಸುಮುಹೂರ್ತೇ ಸಾವಧಾನ ಎಂದು ಮಂತ್ರಘೋಷ ನಡೆದಿತ್ತು.

ಗಿರಿಜತ್ತಿಗೆ ಹುಡುಕುತ್ತಿದ್ದ ಯಾವುದೋ ಒಂದು ಸಂಬಂಧ ಒಮ್ಮೆಲೇ ಅಸಂಬದ್ಧವೂ, ಅನವಶ್ಯಕವೂ, ಅರ್ಥಹೀನವೂ ಆಗಿ ಹೋಯ್ತು. ಗಿರಿಜತ್ತಿಗೆಯ ಕೈಲಿದ್ದ ಅಕ್ಷತೆ ಕಾಳು ಅವಳ ಕೈ ಬೆವರಿಗೆ ಬಣ್ಣ ಕಳೆದುಕೊಂಡು ಬಿಳಿಬಿಳಿ ಅಕ್ಕಿ ಕಾಳಾಯಿತು, ಅರಿಸಿನ ಕುಂಕುಮದ ಕಲೆ ಮಾತ್ರ ಅವರ ಕೈಗುಳಿದಿತ್ತು. ಸುಖ ದುಃಖವೆನ್ನದೆ ಎಲ್ಲವನ್ನೂ ನುಂಗಿಕೊಳ್ಳುತ್ತಲೇ ಬಂದಿದ್ದ ಶಂಕ್ರಣ್ಣ ಉಡುಗೊರೆ ಹಾಕಲು ಗಿರಿಜತ್ತಿಗೆಯನ್ನು ಕೂಗಿ ಕರೆದ.

ಇತ್ತ ಕುಮ್ರಿ ಗದ್ದೆಯ ಆಯಿ ಮತ್ತೊಂದು ಹಾಡು ಸುಗಿದಿದ್ದಳು...

ಆರತಿ ಬೆಳಗುವ ಬಾರೆ। ಹರುಷದಿಂದಲಿ ನವ ದಂಪತಿಗೆ ।।ಪ।।
ಶೃಂಗರಿಸಿರುವ ಮಂಟಪದಲ್ಲಿ ಕುಳಿತಿಹ ಚಂದದ ಜೋಡಿಗೆ ಮಂಗಳದಾರತಿ ತಾರೆ ।।1।।
ಆ ರತಿ ಮನ್ಮಥರಂದದಿ ತೋರುತಿಹ ಸತಿ ಪತಿಗೆ
ಆರತಿ ಹಿಡಿಯಲು ಸಂತೋಷದಿ ಬಾರೆ ।।
ಆದರ್ಶದಿ ಬದುಕಿ ಬಾಳಿರಿ ಈ ಧರೆಯಲ್ಲಿ ಎಂದೆನ್ನುತ ಹರಸುವ ಬಾರೆ।
ಆರತಿ ತಾರೆ। ಮಂಗಳಾರತಿ ಬೆಳಗುವ ಬಾರೆ ।।2।।


## ಛಾಯಾ ಭಟ್

ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಛಾಯಾ ಭಟ್ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಕತೆ, ಲೇಖನಗಳು ಕನ್ನಡದ ದೈನಿಕ ಹಾಗೂ ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನವರು.